||ಶ್ರೀಃ||

|| ಶ್ರೀಭಾವಿಸಮೀರ ತತ್ವಪ್ರಸಾರಣ ಪ್ರತಿಷ್ಠಾನ ||

||ಸೋದೆ ವಾದಿರಾಜ ಮಠ, ಉಡುಪಿ||

# ಆರಾಧನಾ ಪರೀಕ್ಷಾ - ೨೦೨೪-೨೫

ಗುರುರಾಜರ ಭಕ್ತರೇ,

ಪ್ರಾತಃಸ್ಮರಣೀಯರಾದ ಮನನಶೀಲಮುನಿ ಶ್ರೀವಿಶ್ವೋತ್ತಮತೀರ್ಥ ಶ್ರೀಪಾದಂಗಳವರಿಂದ ಭಗವತ್ಸಂಕಲ್ಪದಂತೆ ಶ್ರೀಭಾವಿಸಮೀರಗುರುಕುಲ ಸ್ಥಾಪನೆಗೊಂಡಿತು, ಭಾವಿಬ್ರಹ್ಮಶ್ರೀಮಧ್ವಾಚಾರ್ಯರ ಹಾಗೂ ಭಾವಿಸಮೀರ ಶ್ರೀವಾದಿರಾಜಗುರುಸಾರ್ವಭೌಮರ ಗ್ರಂಥಗಳ ಸಾಂಪ್ರದಾಯಿಕ ಅಧ್ಯಯನವೇ ಗುರುಕುಲದ ಮುಖ್ಯ ಉದ್ದೇಶ. ಶ್ರೀವಿಶ್ವೋತ್ತಮತೀರ್ಥರ ಕರಕಮಲ ಸಂಜಾತರಾದ ಶ್ರೀ ವಿಶ್ವವಲ್ಲಭತೀರ್ಥರು ತಮ್ಮ ವಿಶಿಷ್ಟಚಿಂತನೆಗಳಿಂದ ಗುರುಗಳ ಅನುಗ್ರಹದಿಂದ, ಗುರುಕುಲದ ಕಾರ್ಯವ್ಯಾಪ್ತಿಯನ್ನು ವಿಸ್ತಾರಗೊಳಿಸಿದ್ದಾರೆ. ವಿಶೇಷವಾಗಿ ಸಾಹಿತ್ಯಾಧ್ಯಯನದಲ್ಲಿ ಪ್ರಾಚೀನ ಪದ್ಧತಿ, ತರ್ಕ, ವೇದಾಂತ ಶಾಸ್ತ್ರಗಳ ಪಾಂಕ್ತ ಅಧ್ಯಯನ. ಋಕ್-ಯಜು-ಸಾಮವೇದಗಳ ಘನಾಂತ ಸಮಗ್ರ ಅಧ್ಯಯನದ ವ್ಯವಸ್ಥೆಯನ್ನು ಕಲ್ಪಿಸಿದ್ದಾರೆ. ಗುರುರಾಜರ ಗ್ರಂಥಗಳ ಅಧ್ಯಯನ ಹಾಗೂ ಅಧ್ಯಾಪನಗಳು ವ್ಯಾಪಕವಾಗಿ ನಡೆಯಬೇಕೆಂದು . ಸಂಕಲ್ಪಿಸಿದ್ದಾರೆ, ಶ್ರೀವಾದಿರಾಜಕೃತಗ್ರಂಥಗಳ ಅಧ್ಯಯನಕ್ಕೆ ಪ್ರೋತ್ಸಾಹ ನೀಡಲು ಸಾಂಪ್ರದಾಯಿಕಅಧ್ಯಯನಾಸಕ್ತರಿಗೆ, ಲೌಕಿಕ ಉದ್ಯೋಗದಲ್ಲಿ ಇರುವವರಿಗೆ, ಮಹಿಳೆಯರಿಗೆ ಮತ್ತು ಮಕ್ಕಳಿಗೆ ಶ್ರೀಗುರುರಾಜರ ಗ್ರಂಥಗಳ ಪರೀಕ್ಷೆಯನ್ನು ಶ್ರೀರಾಜರ ಆರಾಧನಾ ನಿಮಿತ್ತವಾಗಿ ಏರ್ಪಡಿಸಿರುತ್ತಾರೆ.ಈ ಪರೀಕ್ಷೆಗಳಲ್ಲಿ ಶ್ರೀರಾಜರ ಭಕ್ತರಾದ ತಾವೆಲ್ಲರೂ ಪಾಲ್ಗೊಂಡು ವೃಂದಾವನಪತಿ ಶ್ರೀಹಯಗ್ರೀವ ದೇವರ ಶ್ರೀವೇದವ್ಯಾಸರ ಶ್ರೀಮದಾನಂದತೀರ್ಥರ ಶ್ರೀವಾದಿರಾಜರ ಶ್ರೀಭೂತರಾಜರ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಸವಿನಯ ಪ್ರಾರ್ಥನೆ.

ಈ ಪರೀಕ್ಷೆಗಳು ಅನೇಕ ವಿಭಾಗಗಳಲ್ಲಿ ನಡೆಯಲಿದ್ದು, ವಿಭಾಗಗಳು ಕೆಳಕಂಡಂತಿವೆ :

## ಆರಾಧನಾ ಪರೀಕ್ಷೆಯ ವಿಭಾಗಗಳು

ವಿಭಾಗ ೧- {ಸ್ತೋತ್ರಗಳು} ( ಮಕ್ಕಳ ವಿಭಾಗ )

ಭಾಗ ೧ - ಏಳು ಸ್ತೋತ್ರಗಳು    ಭಾಗ ೨ – ಆರು ಸ್ತೋತ್ರಗಳು

ಭಾಗ ೩ – ಆರು ಸ್ತೋತ್ರಗಳು    ಭಾಗ ೪ – ರಾಜರಪರಾಕು ಇತ್ಯಾದಿ

ವಿಭಾಗ ೨- { ಶ್ರೀ ವಾದಿರಾಜರ ಸಂಸ್ಕೃತ ಸಾಹಿತ್ಯ }

ಸರಸ ಭಾರತಿ ವಿಲಾಸ

ಭಾಗ ೧ – ಮೊದಲ ೬ ವಿಲಾಸ

ಭಾಗ ೨ – ಕೊನೆಯ ೬ ವಿಲಾಸ

ತೀರ್ಥ ಪ್ರಬಂಧ

ಭಾಗ ೧ – ಪಶ್ಚಿಮ ಪ್ರಬಂಧ , ಉತ್ತರ ಪ್ರಬಂಧಗಳು.

ಭಾಗ ೨ – ದಕ್ಷಿಣ ಪ್ರಬಂಧ , ಪೂರ್ವ ಪ್ರಬಂಧಗಳು.

ಸ್ವಾಪ್ನ ವೃಂದಾವನಾಖ್ಯಾನ

ಅಣುವೃಂದಾವನಾಖ್ಯಾನ ಅರ್ಥ ಸಹಿತ ಹಾಗು ಆಖ್ಯಾನಪರಿಚಯಪದ್ಧತಿ

ವಿಭಾಗ ೩- { ಶ್ರೀ ವಾದಿರಾಜರ ಕನ್ನಡ ಸಾಹಿತ್ಯ }

ಭಾಗ ೧ - ಲಕ್ಷ್ಮೀ ಶೋಭಾನೆ ಮತ್ತು ಸ್ವಪ್ನ ಪದ

ಭಾಗ ೨ – ವೈಕುಂಠ ವರ್ಣನೆ ಮೋಕ್ಷ ಸಂಧಿ

ಭಾಗ ೩ – ವೈಕುಂಠ ವರ್ಣನೆ ಲಯ ಸಂಧಿ ಮತ್ತು ಶ್ರೀ ವಾದಿರಾಜರ ಪರಾಕು/ ಶ್ರೀ ವಾದಿರಾಜರ ಸುಳಾದಿ

ಭಾಗ ೪ – ವೈಕುಂಠ ವರ್ಣನೆ ಸೃಷ್ಟಿ ಸಂಧಿ ಮತ್ತು ಲಯ ಸಂಧಿ

*********

# ಪರೀಕ್ಷಾ ನಿಯಮಗಳು

- ವಾಚನ ಮತ್ತು ಲೇಖನ ಎಂಬ ಎರಡು ಸ್ತರದಲ್ಲಿ ಪರೀಕ್ಷೆಗಳು ನಡೆಯುತ್ತವೆ.
- ಪರೀಕ್ಷೆಗೆ ಭಾಗವಹಿಸಲು ವಯೊಮಾನದ ಮಿತಿ ಇರುವುದಿಲ್ಲ.
- ಪರೀಕ್ಷಾರ್ಥಿ ಗಳು ತಾವು ಕಲಿತ ವಿದ್ಯೆಯನ್ನು ಶ್ರೀವಾದಿರಾಜರ ಸನ್ನಿಧಿಯಲ್ಲಿ ಸಮರ್ಪಿಸುವುದೇ ಪರೀಕ್ಷೆಯ ಮುಖ್ಯ ಉದ್ದೇಶ .
- ಪ್ರತಿಯೊಂದು ವಿಭಾಗಕ್ಕೂ ಅಂತರ್ಜಾಲದ ಮೂಲಕ ಪಾಠದ ವ್ಯವಸ್ಥೆಯನ್ನು ಮಾಡಲಾಗುತ್ತದೆ.
- ಸ್ತೋತ್ರ ವಿಭಾಗದ ಪರೀಕ್ಷೆಯು ಕೇವಲ ವಾಚನ ರೂಪದಲ್ಲಿ ನಡೆಯುತ್ತದೆ, ತಪ್ಪಿಲ್ಲದೆ, ಸುಶ್ರಾವ್ಯವಾಗಿ, ಕ್ರಮವಾಗಿ ವಾಚನ ಮಾಡಬೇಕು .
- ಲಕ್ಷ್ಮೀ ಶೋಭಾನೆಯ ಎಲ್ಲಾ ಪದ್ಯಗಳನ್ನು ಕ್ರಮವಾಗಿ ನೋಡದೆ ವಾಚನ ಮಾಡಬೇಕು , ಉಳಿದ ಗ್ರಂಥಗಳಲ್ಲಿ ಆಯ್ದ ಪದ್ಯಗಳನ್ನು ಮಾತ್ರ ನೋಡದೇ ಹೇಳಬೇಕು, ಉಳಿದ ಪದ್ಯಗಳನ್ನು ನೋಡಿ ವಾಚನ ಮಾಡಬೇಕು .
- ಎಲ್ಲ ವಿಭಾಗದ ಪರೀಕ್ಷೆಗಳನ್ನು ತಮ್ಮ ಪ್ರಾಂತೀಯ ಭಾಷೆಯಲ್ಲಿ ಅಥವಾ ಸಂಸ್ಕೃತ ಭಾಷೆಯಲ್ಲೂ ಕೊಡಬಹುದು.
- ಈ ಎಲ್ಲ ಕೃತಿಗಳ ಪರೀಕ್ಷೆಗಳು ೧) ಆಯ್ದ ಪದ್ಯಗಳ ಕಂಠಪಾಠ ೨) ಕಠಿಣ ಪದಗಳ ಅರ್ಥ ೩) ತಾತ್ಪರ್ಯ ೪) ಪ್ರಮೇಯ ಎಂಬ  ನಾಲ್ಕು ಅಂಶಗಳನ್ನು ಹೊಂದಿರುತ್ತವೆ.
- ತೀರ್ಥ ಪ್ರಬಂಧ , ಸರಸ ಭಾರತಿ ವಿಲಾಸ ಪರೀಕ್ಷೆಗಳು ೧) ಆಯ್ದ ಶ್ಲೋಕಗಳು ೨) ಶ್ಲೋಕಾರ್ಥ ೩) ವಿಗ್ರಹ ೪) ಧಾತು,ಪ್ರತ್ಯಯಗಳು ೫) ತಾತ್ಪರ್ಯ ಮತ್ತು ಪ್ರಮೇಯ ಎಂಬ ಐದು  ಅಂಶಗಳಲ್ಲಿ ನಡೆಯುತ್ತವೆ. ಅಥವಾ ಕೇವಲ ಆಯ್ದ ಶ್ಲೋಕಗಳು ಮತ್ತು ತಾತ್ಪರ್ಯ ಎಂಬ ಎರಡು ಅಂಶಗಳಲ್ಲಿ ನಡೆಯುತ್ತವೆ.
- ಸ್ವಾಪ್ನ ವೃಂದಾವನಾಖ್ಯಾನ ವಿಭಾಗದಲ್ಲಿ ಅಣುವೃಂದಾವನಾಖ್ಯಾನ ಅರ್ಥ ಸಹಿತ ಕಂಠಪಾಠ ,ಹಾಗು ಆಖ್ಯಾನಪರಿಚಯಪದ್ಧತಿ ( ಆಖ್ಯಾನ ಕುರಿತಾದ ಕೆಲವು ಪ್ರಶ್ನೆಗಳು).
- ಈ ಎಲ್ಲ ಪರೀಕ್ಷೆಗಳು ಶ್ರೀ ವಾದಿರಾಜರ ಆರಾಧನಾ ಪೂರ್ವಭಾವಿಯಾಗಿ ಶ್ರೀ ಸೋದಾ ಕ್ಷೇತ್ರದಲ್ಲಿ ನಡೆಯಲಿವೆ.
- ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾದವರನ್ನು ಸೋದೆ ಶ್ರೀಗಳು ಆರಾಧನಾ ಸಂದರ್ಭದಲ್ಲಿಅನುಗ್ರಹಿಸುತ್ತಾರೆ.

- ಭಾಗವಹಿಸಿದ ಪ್ರತಿಯೊಬ್ಬರಿಗೂ ಶ್ರೀಮಠದಿಂದ ಪ್ರಮಾಣ ಪತ್ರ , ಗೌರವ ಸಂಭಾವನೆಯನ್ನು ನೀಡಲಾಗುತ್ತದೆ.
- ಆಗಸ್ಟ್-೩೧ ರ ಒಳಗಡೆ ತಮ್ಮ ಹೆಸರನ್ನು ಕೆಳಗೆ ಸೂಚಿಸಿದ ಗೂಗಲ್ ಫಾರ್ಮ್ ನ ಮೂಲಕ ನೊಂದಾಯಿಸಬೇಕು.

- ಗೂಗಲ್ ಫಾರ್ಮ್ ಲಿಂಕ್ –
- ಪರೀಕ್ಷಾರ್ಥಿಗಳ ವಸತಿ , ಊಟ ಮುಂತಾದ ವ್ಯವಸ್ಥೆಯನ್ನು ಶ್ರೀ ಮಠದಿಂದ ಮಾಡಲಾಗುವದು. ದರ್ಶನ,ವಸ್ತ್ರಸಂಹಿತೆ ಇತ್ಯಾದಿಗಳಲ್ಲಿ ಶ್ರೀ ಮಠದ ನಿಯಮಗಳನ್ನು ಪಾಲಿಸಬೇಕು .
- ಪರೀಕ್ಷಾ ಅಭ್ಯರ್ಥಿಗಳು ಮಕ್ಕಳು ಅಥವಾ ವೃದ್ಧರಾಗಿದ್ದಲ್ಲಿ ಜೊತೆಗೆ ಒಬ್ಬರಿಗೆ ಮಾತ್ರ ವ್ಯವಸ್ಥೆ ಕಲ್ಪಿಸಲಾಗುವದು.
- ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ – ಗುರುರಾಜಾಚಾರ್ಯ - 8762449999

**************

## <u>ವೇದಪರೀಕ್ಷಾ ನಿಯಮಗಳು</u>

- ವೈದಿಕ ನಿಯಮಗಳಿಗೆ ಅನುಗುಣವಾಗಿ ಪರೀಕ್ಷೆಯನ್ನು ಕೊಡತಕ್ಕದ್ದು. ಸ್ವಶಾಖೆಯಲ್ಲಿಯೇ ಪರೀಕ್ಷೆಯನ್ನು ಕೊಡತಕ್ಕದ್ದು.
- ಸಂಹಿತಾ, ಕ್ರಮ, ಘನಾಂತ ಪರೀಕ್ಷೆಗೆ ಆವೇದನೆ ಸಲ್ಲಿಸಬಹುದು.
- ಋಗ್ವೇದ ಶಾಕಲ ಶಾಖೆ, ಶುಕ್ಲ ಯಜುರ್ವೇದ ಕಾಣ್ವ ಹಾಗೂ ಮಾಧ್ಯಂದಿನ ಶಾಖೆ, ಕೃಷ್ಣ ಯಜುರ್ವೇದ ತೈತ್ತರೀಯ ಶಾಖೆ, ಸಾಮವೇದ,ಕೌಥುಮ, ಜೈಮಿನಿ ಹಾಗೂ ರಾಣಾಯನೀಯಶಾಖೆ, ಅಥರ್ವವೇದ, ಶೌನಕ ಮತ್ತು ಪಿಪ್ಪಲಾದ ಶಾಖೆಯ ಪರೀಕ್ಷೆಗಳು ನಡೆಯಲಿವೆ. ಆವೇದನೆ ಸಲ್ಲಿಸಬಹುದು.
- ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾದವರನ್ನು ಸ್ವೋದೆ ಶ್ರೀಗಳು ಆರಾಧನಾ ಸಂದರ್ಭದಲ್ಲಿ ಅನುಗ್ರಹಿಸುತ್ತಾರೆ.
- ಆಗಸ್ಟ್ 30 ರ ಒಳಗೆ ಅಭ್ಯರ್ಥಿಗಳು ತಮ್ಮ ಹೆಸರನ್ನು ನೊಂದಾಯಿಸಬೇಕು.
- ಪರೀಕ್ಷಾರ್ಥಿಗಳ ವಸತಿ ಊಟ ಮೊದಲಾದ ವ್ಯವಸ್ಥೆ ಮಠದಿಂದ ಆಗುತ್ತದೆ.
- ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ – ವಿ. ಕಾರ್ತಿಕಾಚಾರ್ಯ - 8778458192